ಮುದುಕ ಇನ್ನೂ ಹಚ್ಚದ ಸಿಗಾರಿನ ಮೇಲಿನ ಕೆಂಪು ಬ್ಯಾಂಡನ್ನು ಸಾವಕಾಶವಾಗಿ ಬಿಚ್ಚುತ್ತಾ, 'ನಿನಗೆ ಸಾಧ್ಯವಿಲ್ಲದ ವಸ್ತುವನ್ನು ಪಣ ಕಟ್ಟಲು ನಾನು ಕೇಳುವುದಿಲ್ಲ ಹುಡುಗಾ!' ಎಂದ.

'ಹಾಗಾದರೆ ನಾನು ಏನು ಕಟ್ಟಬೇಕು ಹೇಳಿ ಅಂಕಲ್' ಎಂದ ಹುಡುಗ.

'ಒಂದು ಸಣ್ಣ ವಸ್ತು. ಅದನ್ನು ನೀನು ಕಳೆದುಕೊಂಡರೂ ನಿನಗೇನು ನಷ್ಟವಿಲ್ಲ. ಅಂತಾದ್ದು!'

'ಅದೇನು ಅಂಕಲ್?' ಹುಡುಗ ಕುತೂಹಲದಿಂದ ಕೇಳಿದ.

'ಏನಿಲ್ಲ. ನಿನ್ನ ಎಡಗೈಯ ಕಿರು ಬೆರಳು!' ಮುದುಕ ನಿರ್ಲಿಪ್ತತೆಯಿಂದ ಹೇಳಿದ.

'ಏನೂ?!'

'ನೀನು ಗೆದ್ದರೆ ನನ್ನ ಕ್ಯಾಡಿಲಾಕ್ ಕಾರು ನಿನ್ನದು. ನಾನು ಗೆದ್ದರೆ ನಿನ್ನ ಎಡಗೈ ಕಿರು ಬೆರಳು ನನ್ನದು. ಇಷ್ಟೇ.'

'ನನಗೆ ಅರ್ಥವಾಗಲಿಲ್ಲ ಅಂಕಲ್. ನನ್ನ ಕಿರು ಬೆರಳು ನಿಮ್ಮದೆಂದರೆ?'

'ಅಂದರೆ ಅದನ್ನು ನಾನು ಕತ್ತರಿಸಿ ಇಟ್ಟುಕೊಳ್ಳುತ್ತೇನೆ!'

'ಇದೆಂತಾ ವಿಲಕ್ಷಣ ಪಣ ಅಂಕಲ್. ನನ್ನ ಪಾಲಿನದು ಡಾಲರೇ ಇರಲಿ.' ಹುಡುಗ ಎಂದ ದುಗುಡದಿಂದ.

ಮುದುಕ ಆರಾಮಾಗಿ ಕುರ್ಚಿಗೆ ಒರಗಿ ಕುಳಿತ. ಕೈಗಳನ್ನು ಚೆಲ್ಲುತ್ತಾ ಅವನು ಹೇಳಿದ 'ಇದೊಳ್ಳೆ ಫಜೀತಿಯಾಯ್ತಲ್ಲ! ಹತ್ತರಲ್ಲಿ ಹತ್ತು ಭಾರಿಯೂ ನಿನ್ನ ಲೈಟರ್ ಹಚ್ಚಿಕೊಳ್ಳುತ್ತೆ ಎನ್ನುತ್ತೀಯಾ! ಆದರೂ ಪಣವೊಡ್ಡಲು ಯಾಕಿಷ್ಟು ಅಂಜಿಕೆ? ಹೋಗಲಿ, ಪಣದ ವಿಷಯ ಇಲ್ಲೇ ಮರೆತುಬಿಡೋಣ.'

**'ಹುಡುಗ ಸೋತರೆ ಅವನ ಬೆರಳನ್ನು ಕತ್ತರಿಸುವ ವಿಚಾರದಲ್ಲಿ ನೀವು ಸೀರಿಯಸ್ಸಾಗಿದ್ದೀರಾ?'**

**'ಖಂಡಿತವಾಗಿಯೂ. ಹಾಗೆಯೇ ನಾನು ಸೋತರೆ ನನ್ನ ಕ್ಯಾಡಿಲಾಕ್ ಅವನದೇ... ಈಗ ನಾವೆಲ್ಲಾ ನನ್ನ ರೂಮಿಗೆ ಹೋಗೋಣ.' ಅವನು ಎದ್ದ.**

ಈಜು ಕೊಳದಲ್ಲಿ ಬಿದ್ದು ಒದರಾಡುತ್ತಿದ್ದ ತನ್ನ ಸಹಪಾಠಿಗಳನ್ನು ನೋಡುತ್ತಾ ಹುಡುಗ ಕೆಲವು ಗಳಿಗೆ ಸುಮ್ಮನಾದ. ತಕ್ಷಣ ಅವನಿಗೆ ತಾನಿನ್ನೂ ಸಿಗರೇಟು ಹಚ್ಚದಿರುವುದು ನೆನಪಿಗೆ ಬಂತು. ಸಿಗರೇಟನ್ನು ತುಟಿಗಳಿಗೆ ಸಿಕ್ಕಿಸಿ, ಬಲಗೈಯಲ್ಲಿ ಲೈಟರನ್ನು ಎತ್ತಿ ಎಡಗೈಯನ್ನು ಗಾಳಿಗೆ ಅಡ್ಡವಿರಿಸಿ ಹೊತ್ತಿಸಿದ. ಹಳದಿ ಬಣ್ಣದ ಜ್ವಾಲೆ ಮಂದವಾಗಿ ಉರಿಯತೊಡಗಿತು. ಎಡಗೈ ಅಡ್ಡವಿರಿಸಿದ್ದರಿಂದ ಅದು ಆರುವ ಸಾಧ್ಯತೆಗಳಿರಲಿಲ್ಲ.

'ನನಗೂ ಹಚ್ಚಪ್ಪ' ನಾನು ಹುಡುಗನನ್ನು ಕೇಳಿಕೊಂಡೆ. ಅವನು ಎದ್ದು ನನ್ನ ಬಳಿ ಬಂದ.

'ಥ್ಯಾಂಕ್ಸ್ ಕಣಪ್ಪ.' ಅವನು ಅವನ ಕುರ್ಚಿಯ ಮೇಲೆ ಕುಳಿತುಕೊಂಡ. ಆದರೆ ಮುದುಕ ಅವನ ಸಮಾಧಾನವನ್ನು ಅಪಹರಿಸಿದ್ದ. ಒಳಗಿಂದೊಳಗೆ ಅವನು ಯಾವುದೋ ಉದ್ವೇಗದಿಂದ ಕಿರಿಕಿರಿ ಅನುಭವಿಸುತ್ತಿದ್ದ. ಕುಳಿತಲ್ಲಿಯೇ ಚಡಪಡಿಸುತ್ತಿದ್ದ. ಅವನು ಟವೆಲಿನಿಂದ ತನ್ನ ಮುಖ, ಎದೆಯನ್ನು ಒರೆಸತೊಡಗಿದ. ಕೊನೆಗೆ ತನ್ನ ಎರಡೂ ಕೈಗಳಿಂದ ಮೊಣಕಾಲುಗಳನ್ನು ತಟ್ಟತೊಡಗಿದ. ಕೆಲವು ಕ್ಷಣಗಳ ನಂತರ ಅವನು ಒಂದು ಕಾಲನ್ನು ಅಲುಗಾಡಿಸತೊಡಗಿದ.